**1 ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ.**

**ಸಿ.ಸಿ. ನಂ. 6323/2021**

| | | |
|---|---|---|
| **ಹೆಸರುಃ** | **ಗೀತಾ** | **ದೋ.ಸಾಃ 1** |
| **ಗಂಡನ ಹೆಸರುಃ** | **ನಾಗರಾಜ್** | **ಪ್ರಾ.ಸಾಃ 1** |
| **ವಯಸ್ಸುಃ** | **42 ವರ್ಷ** | **ದಿನಾಂಕಃ 18-07-2025** |
| **ಉದ್ಯೋಗಃ** | **ಕೂಲಿ** | |
| **ವಾಸಸ್ಥಳಃ** | **ಎಡಹಳ್ಳಿ ಕ್ಯಾಂಪ್** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-6 ನನ್ನ ಗಂಡ. ಚಾಸಾ-2 ರಿಂದ 4 ನಮ್ಮ ಊರಿನವರು. ಚಾಸಾ-7 ರಿಂದ 9 ಸಹ ನಮ್ಮ ಊರಿನವರು.

ದಿನಾಂಕ 29-09-2020 ರಂದು ಬೆಳಗ್ಗೆ 10-00 ಗಂಟೆಗೆ ನನ್ನ ಗಂಡ ಜಾನುವಾರುಗಳನ್ನು ಮೇಯಿಸಲು ಮನೆಯಿಂದ ಹೋದರು ನಾನು ಮತ್ತು ನನ್ನ ಮಕ್ಕಳು ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲೇ ಇರುವ ಚಾಸಾ- 7 ರವರ ಅಡಿಕೆ ಮನೆಗೆ ಅಡಿಕೆ ಸುಲಿಯಲು ಹೋದೆವು. ಆಗ ನಮ್ಮ ಮನೆಯ ಬಾಗಿಲಿಗೆ ಚೀಲಿಕ ಹಾಕಿದ್ದೇವು. ಮಧ್ಯಾಹ್ನ 12-30 ಗಂಟೆಗೆ ಮನೆಗೆ ವಾಪಸು ಬಂದು ನೋಡಿದಾಗ ಮನೆಯ ಮುಂದಿನ ಬಾಗಿಲಿಗೆ ಒಳಗಿನಿಂದ ಚೀಲಿಕ ಹಾಕಲಾಗಿತ್ತು. ಹಿಂದಿನ ಬಾಗಿಲಿಗೆ ಬಂದು ನೋಡಿದಾಗ ಸದರಿ ಬಾಗಿಲು ತೆರೆದಿತ್ತು. ಮನೆಯ ಒಳಗೆ ಹೋಗಿ ನೋಡಲಾಗಿ ಬೀರುವಿನ ಬಾಗಿಲು ಹಾಕಿತ್ತು. ಬೀರುವಿನ ಬೀಗದ ಕೈ ಬ್ಯಾಗಿನಲ್ಲಿತ್ತು. ಸದರಿ ಬೀಗವನ್ನು ತೆಗೆದು ನೋಡಲಾಗಿ ಬೀರುವಿನ ಒಳಗೆ ಇದ್ದ 38 ಗ್ರಾಂ ತೂಕದ ಬಂಗಾರದ ಮಾಂಗಲ್ಯ

ಸರ, 10 ಗ್ರಾಂ ತೂಕದ ಬಂಗಾರದ ಒಂದು ಜೊತೆ ಹ್ಯಾಂಗ್‌ಹಿಂಗ್, 3 ಗ್ರಾಂ ತೂಕದ ಬಂಗಾರದ ಕಿವಿಯ ಗುಂಡು, ತಲಾ 5 ಗ್ರಾಂ ಮತ್ತು 2 ಗ್ರಾಂ ತೂಕದ ಒಂದು ಎರಡು ಉಂಗುರಗಳು, ಬೆಳ್ಳಿಯ 2 ಜೊತೆ ಕಾಲು ಚೈನು ಮತ್ತು ಇನ್ನಿತರೆ ಸಣ್ಣ ಪುಟ್ಟ ಬಂಗಾರದ ಆಭರಣಗಳು ಸೇರಿ ಒಟ್ಟಾರೆ 55 ಗ್ರಾಂ ಬಂಗಾರ ಕಳ್ಳತನವಾಗಿತ್ತು. ಅದೇ ರೀತಿ ಬೀರುವಿನಲ್ಲಿಟ್ಟಿದ್ದ ರೂ.13500/- ಹಣ ಕಳ್ಳತನವಾಗಿತ್ತು.

ನನಗೆ ಗಾಬರಿಯಾಗಿ ಏನು ತೋಚದಂತಾಯಿತು ಮತ್ತು ನನ್ನ ಮಕ್ಕಳು ನನ್ನ ಗಂಡನನ್ನು ಕರೆದುಕೊಂಡು ಬಂದರು. ನಂತರ ನನ್ನ ಗಂಡ ನನ್ನನ್ನು ಠಾಣೆಗೆ ಕರೆದುಕೊಂಡು ಬಂದು ದೂರು ಕೊಡಿಸಿದರು. ಸದರಿ ದೂರನ್ನು ಈಗ ನೋಡುತ್ತಿತ್ತು, ಅದನ್ನು ಈಗ ನಿಪಿ-1 ಎಂದು ಮತ್ತು ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ರಾತ್ರಿ 08-00 ಗಂಟೆಗೆ ಪೊಲೀಸರು ನಮ್ಮ ಮನೆಗೆ ಬಂದು ಘಟನಾ ಸ್ಥಳವನ್ನು ಪರಿಶೀಲನೆ ಮಾಡಿ ದಾಖಲೆಗಳನ್ನು ಬರೆದು ಫೋಟೋಗಳನ್ನು ಪಡೆದುಕೊಂಡರು ಮತ್ತು ನಕಾಶೆ ಬರೆದರು. ಪೊಲೀಸರು ಬರೆದ ದಾಖಲೆಗಳನ್ನು ಈಗ ನೋಡುತ್ತಿತ್ತು, ಅವುಗಳನ್ನು ಈಗ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ನಿ.ಪಿ.-2 ರ ದಾಖಲೆಯಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಪೊಲೀಸರು ರಾತ್ರಿ 08-00 ರಿಂದ 09-00 ಗಂಟೆಯವರೆಗೆ ಬರೆದರು.

ದೂರು ಕೊಟ್ಟ 10 ದಿನಗಳ ನಂತರ ಪೊಲೀಸರು ನಮ್ಮನ್ನು ಭದ್ರಾವತಿ ಪೊಲೀಸ್ ಠಾಣೆಗೆ ಕರೆಸಿ ಶಶಿ ಎಂಬುವವನ್ನು ನಮಗೆ ತೋರಿಸಿ ಆತನೇ ನಮ್ಮ ಮನೆಯ ಕಳ್ಳತನ ಮಾಡಿದ್ದ ಎಂದು ತಿಳಿಸಿದರು. ಸದರಿ ಶಶಿ ಎಂಬಾತನಿಂದ ಒಡವೆಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಆರೋಪಿ ಶಶಿ ಜೊತೆ ಮತ್ತೊಬ್ಬ ವ್ಯಕ್ತಿ ಸಹ ಇದ್ದನು. ಆತನ ಹೆಸರು ಸರಿಯಾಗಿ ಗೊತ್ತಿಲ್ಲ.

ದೂರು ಕೊಟ್ಟ 20 ದಿನಗಳ ನಂತರ ಕಳ್ಳತನವಾದ ಆಭರಣಗಳನ್ನು ಬಿಡಿಸಿಕೊಂಡೆವು ಹಣ ಸಿಗಲಿಲ್ಲ.

ನಾನು ಬಿಡಿಸಿಕೊಂಡ ಮತ್ತು ಕಳ್ಳತನವಾಗಿದ್ದ ಬಂಗಾರದ ಆಭರಣಗಳನ್ನು ಈಗ ನನಗೆ ತೋರಿಸಲಾದ ಫೋಟೋಗಳಲ್ಲಿ ನೋಡಿ ಗುರುತಿಸುತ್ತಿದ್ದೇನೆ. ಸದರಿ ಫೋಟೋಗಳಲ್ಲಿ ಹಣದ ಭಾವಚಿತ್ರ ಸಹ ಇದ್ದು ಪೊಲೀಸರು ಅದನ್ನು ನಮಗೆ ಕೊಟ್ಟಿಲ್ಲ. ಸಾಕ್ಷಿ ನೋಡಿ ಗುರುತಿಸಿದ ಫೋಟೋಗಳನ್ನು ಈಗ ನಿಪಿ–4 ಮತ್ತು 5 ಎಂದು ಗುರುತಿಸಲಾಯಿತು.

ಪೊಲೀಸರ ವಶದಲ್ಲಿದ್ದ ಮತ್ತು ನನಗೆ ತೋರಿಸಲಾದ ಶಶಿ ಎಂಬ ಆರೋಪಿಯನ್ನು ಮತ್ತೇ ನೋಡಿದರೆ ಗುರುತಿಸುತ್ತೇನೆ.

ಈ ಪ್ರಕರಣದ ಆರೋಪಿತರನ್ನು ಮತ್ತೇ ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು, ಆತನ ಗೈರು ಹಾಜರನ್ನು ಮನ್ನಿಸುವಂತೆ ವಕೀಲರು ಅಶಜಿ ಸಲ್ಲಿಸಿರುತ್ತಾರೆ. ಆರೋಪಿ ಗುರುತಿನ ಬಗ್ಗೆ ತಕರಾರು ಇರುವುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು ಮತ್ತು ಆರೋಪಿಯನ್ನು ಗುರುತಿಸುವಿಕೆಗಾಗಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

Sd/-

**1 ನೇ ಹೆಚ್ಚುವರಿ ಪ್ರ.ದ.ನ್ಯಾದಂ. ಭದ್ರಾವತಿ.**